**ಓ.ಎಸ್. ನಂಃ 22/2017**

**ಪಿ.ಡಬ್ಲ್ಯೂಃ 4**

**ದಿನಾಂಕ 23.04.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಜೆ.ಎಲ್.ಡಿ.ವಕೀಲರಿಂದಃ**

1. ನಾನು ಹತ್ತನೆಯ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಅಲ್ಪ ಸ್ವಲ್ಪ ಓದಲು ಮತ್ತು ಬರೆಯಲು ಬರುತ್ತದೆ. ಈ ದಿನ ನ್ಯಾಯಲಾಯದಲ್ಲಿ ಸಾಕ್ಷಿ ನುಡಿಯಲು ನನ್ನನ್ನು ವಾದಿ ಸಂಖ್ಯೆ.1(ಎಫ್) ರವರರಾದ ಸೋಮಶೇಖರವರು ಕರೆದುಕೊಂಡು ಬಂದಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಇರುವ ವಿಷಯಗಳನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

2. ಹಣದ ವ್ಯವಹಾರದ ಬಗ್ಗೆ ಸಾಕ್ಷಿ ನುಡಿಯಲು ನಾನು ಬಂದಿರುತ್ತೇನೆ. ದಿನಾಂಕ 16.01.2014 ರಂದು ನಾನು ನಿಪಿ.3 ರ ಪ್ರೊನೋಟ್‌ಗೆ ನನ್ನ ಸಹಿಯನ್ನು ಹಾಕಿರುತ್ತೇನೆ. ನಿಪಿ.3 ರ ಪ್ರೊನೋಟ್‌ಗೆ ನಾನು ಆಂಗ್ಲ ಭಾಷೆಯಲ್ಲಿ ನನ್ನ ಸಹಿಯನ್ನು ಮಾಡಿರುತ್ತೇನೆ. ನೀಲಿ ಶಾಯಿಯ ಪೆನ್ನಿನಲ್ಲಿ ನಾನು ನಿಪಿ.3 ರ ಪ್ರೊನೋಟ್‌ಗೆ ನನ್ನ ಸಹಿಯನ್ನು ಮಾಡಿರುತ್ತೇನೆ.

3. ನಿಪಿ.3 ರ ಪ್ರೊನೋಟ್‌ಗೆ ನಾನು ಸಹಿ ಮಾಡುವಾಗ ನನ್ನೊದಿಗೆ ಇನ್ನೊಬ್ಬ ಸಾಕ್ಷಿದಾರರಾದ ಲಕ್ಷ್ಮಣರವರು ಮತ್ತು ಈ ದಾವೆಯ ಮೂರು ಪ್ರತಿವಾದಿಯರು ಸಹ ಇದ್ದರು. ನಮ್ಮನ್ನು ಹೊರತುಪಡಿಸಿ ಪತ್ರ ಬರಹಗಾರರಾದ ವಸಂತರವರು ಇದ್ದರು. ನಿಪಿ.3 ರ ಛಾಪಾ ಕಾಗದವನ್ನು ಮೃತ ವಾದಿಯಾದ ಕಾಳೇಗೌಡರು ತಂದಿದ್ದರು. ಸದರಿ ದಿನದಂದು ವಾದಿಯು ಪ್ರತಿವಾದಿಯರಿಗೆ 80,000/- ರೂಪಾಯಿ ಹಣವನ್ನು ಕೊಟ್ಟಿದ್ದು, ನಾನು ನೋಟೀನ ಮುಖಬೆಲೆಗಳನ್ನು ನೋಡಿರುವುದಿಲ್ಲ. ನನ್ನ ಸಮಕ್ಷಮದಲ್ಲಿ ಪ್ರತಿವಾದಿಯರು 80,000/-ರೂಪಾಯಿ ಹಣವನ್ನು ಪಡೆದಿರುವುದಿಲ್ಲ ಮತ್ತು ನನ್ನ ಸಮಕ್ಷಮದಲ್ಲಿ ಪ್ರತಿವಾದಿಯರು ನಿಪಿ.3 ರ ಪ್ರೊನೋಟ್ ಗೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

4. ಈ ದಾವೆಯ ವ್ಯವಹಾರದ ನಿಪಿ.3 ರ ಪ್ರೊನೋಟ್‌ಗೆ ಹೊರತುಪಡಿಸಿ ನಾನು ಬೇರೆ ಯಾವುದೇ ಪ್ರೊನೋಟ್‌ಗೆ ಸಾಕ್ಷಿದಾರನಾಗಿ ಸಹಿಯನ್ನು ಮಾಡಿರುವುದಿಲ್ಲ. ನನ್ನ ಮನೆ ಮತ್ತು ವಾದಿಯರ ಮನೆ ಅಕ್ಕ-ಪಕ್ಕದಲ್ಲಿ ಇದೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿಯರು ಒಂದೇ ಗ್ರಾಮಸ್ಥರು ಎಂದರೆ ಸರಿ. ವಾದಿ ಸಂಖ್ಯೆ-1(ಬಿ) ರವರಾದ ಗಾಯತ್ರಿರವರ ಮನೆಗೆ ಹೋಗುವ ರಸ್ತೆ ಮತ್ತು ನಮ್ಮ ಮನೆಗೆ ಹೋಗುವ ರಸ್ತೆ ಒಂದೇ ಆಗಿರುತ್ತದೆ ಎಂದರೆ ಸರಿ. ವಾದಿ ಸಂಖ್ಯೆ-1(ಬಿ) ಮತ್ತು ನಾನು ಒಂದೇ ಬೀದಿಯಲ್ಲಿ ವಾಸವಿದ್ದೇವೆ ಎಂದರೆ ಸರಿಯಲ್ಲ. ನನ್ನ ಮನೆ ಮತ್ತು ವಾದಿ ಸಂಖ್ಯೆ-1(ಬಿ) ರವರ ಮನೆಯ ಮಧ್ಯೆ ಅರ್ದ ಕಿ.ಲೋ ಮೀಟರ್ ಅಂತರವಿದೆ. ನನ್ನ ಮನೆ ಮತ್ತು ವಾದಿ ಸಂಖ್ಯೆ-1(ಎಫ್) ರವರ ಮನೆಯ ಮಧ್ಯೆ ಒಂದು ಕಿ.ಲೋ ಮೀಟರ್ ಅಂತರವಿದೆ. ನಾನು ಮತ್ತು ವಾದಿಯರು ಒಂದೇ ಜನಾಂಗದವರು ಎಂದರೆ ಸರಿ. ವಾದಿಯರು ಮೋಸದಿಂದ ಸೃಷ್ಟಿಸಿದ ನಿಪಿ.3 ಪ್ರೊನೋಟ್‌ಗೆ ಪೂರಕವಾಗುವಂತೆ ಮತ್ತು ವಾದಿಯರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**